ಚಾಮರಾಜನಗರ – ರಾಮಸಮುದ್ರ

# ನಗರಾಭಿವೃದ್ಧಿ ಪ್ರಾಧಿಕಾರ

ಚಾಮರಾಜನಗರ – 571313



**2020–21ನೇ ಸಾಲಿನ**

# ವಾರ್ಷಿಕ ವರದಿ

## 1 ಪೀಠಿಕೆ:–

ಚಾಮರಾಜನಗರ ಪಟ್ಟಣವು ಚಾಮರಾಜನಗರ ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆಯ ಕೇಂದ್ರವಾಗಿದ್ದು, 2011ರ ಜನಗಣತಿಯಂತೆ 69,959 ಜನಸಂಖ್ಯೆಯನ್ನು ಹೊಂದಿರುತ್ತದೆ. ಚಾಮರಾಜನಗರ ನಗರಸಭೆಯು ಈ ಪಟ್ಟಣಕ್ಕೆ ಹೊಂದಿಕೊಂಡಿರುವ ಸ್ಥಳೀಯ ಸಂಸ್ಥೆಯಾಗಿರುತ್ತದೆ. ಈ ನಗರವು ರಾಜ್ಯದ ಸಾಂಸ್ಕೃತಿಕ ನಗರ ಮೈಸೂರಿನಿಂದ 61 ಕಿ.ಮೀ. ಹಾಗೂ ರಾಜ್ಯದ ರಾಜಧಾನಿ ಬೆಂಗಳೂರಿನಿಂದ 180 ಕಿ.ಮೀ. ಅಂತರದಲ್ಲಿರುತ್ತದೆ. ಬೆಂಗಳೂರು–ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ–209, ಚಾಮರಾಜನಗರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿ–150ಎ, ಯಳಂದೂರು–ಗುಂಡ್ಲುಪೇಟೆ ರಾಜ್ಯ ಹೆದ್ದಾರಿ–81 ಹಾಗೂ ಚಾಮರಾಜನಗರ–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ–80 ಇವು ಈ ನಗರದ ಮೂಲಕ ಹಾದುಹೋಗುವ ಮುಖ್ಯ ಹೆದ್ದಾರಿಗಳಾಗಿವೆ. ಈ ನಗರವು ಉತ್ತಮ ಬ್ರಾಡ್ ಗೇಜ್ ರೈಲ್ವೆ ಸಂಪರ್ಕವನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಪಟ್ಟಣವನ್ನು ಯೋಜನಾಬದ್ಧವಾಗಿ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಚಾಮರಾಜನಗರ ಪಟ್ಟಣ ಮತ್ತು ಸುತ್ತಮುತ್ತಲ 26 ಗ್ರಾಮಗಳನ್ನು (ಚಾಮರಾಜನಗರ(ಚನ್ನಿಪುರದಮೋಳೆ), ರಾಮಸಮುದ್ರ, ಕರಿನಂಜನಪುರ, ಸೋಮವಾರಪೇಟೆ, ಗಾಳಿಪುರ, ಮೂಡ್ಲುಪುರ, ಮಲ್ಲಯ್ಯನಪುರ, ಉತ್ತುವಳ್ಳಿ, ಕಾಡಹಳ್ಳಿ, ಮಸಗಾಪುರ, ಮನಗಾನಹಳ್ಳಿ, ಮುಂಚನಹಳ್ಳಿ, ಬೂದಿತಿಟ್ಟು, ಮರಿಯಾಲ, ಗಂಗವಾಡಿ, ಮಾದಾಪುರ, ದೊಡ್ಡಮೋಳೆ, ಕೋಡಿಮೋಳೆ, ಹರದನಹಳ್ಳಿ, ಬಂಡಿಗೆರೆ, ಯಡಪುರ, ಶಿವಪುರ, ಚಂದಕವಾಡಿ, ಕೂಡ್ಲೂರು, ಬಸವನಪುರ, ಹಂಡ್ರಕಳ್ಳಿ) ಸೇರಿಸಿಕೊಂಡು ಸರ್ಕಾರವು ಒಟ್ಟು 120.99 ಚ.ಕಿ.ಮಿ. ವಿಸ್ತೀರ್ಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರನ್ವಯ ಸ್ಥಳೀಯ ಯೋಜನಾ ಪ್ರದೇಶ ಎಂದು ಘೋಷಿಸಿ, ಸದರಿ ಪ್ರದೇಶಕ್ಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರನ್ವಯ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರವನ್ನು ರೂಪಿಸಿ ಆದೇಶ ಹೊರಡಿಸಿರುತ್ತದೆ. ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 21–08–1998 ರಿಂದ ಕಾರ್ಯಾರಂಭಗೊಂಡಿದ್ದು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯೋಜನಾ ಬದ್ದವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುತ್ತಿದೆ. ಪ್ರಾಧಿಕಾರವು ತನ್ನ ಆರ್ಥಿಕ ಇತಿಮಿತಿಯ ನಡುವೆಯೂ ನಗರವನ್ನು ಎಲ್ಲಾ ಮೂಲಭೂತ ಸೌಕರ್ಯಗಳನ್ನೊಳಗೊಂಡ ಯೋಜನಾ ಬದ್ದವಾದ ಆರೋಗ್ಯಕರ ಹಾಗೂ ಸುಂದರ ತಾಣವಾಗಿ ರೂಪಿಸಲು ತೊಡಗಿಸಿಕೊಂಡಿರುತ್ತದೆ.

**ಪ್ರಾಧಿಕಾರದ ಉದ್ದೇಶಗಳು:–**

ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961 ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ–1987 ರನ್ವಯ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆ(ನಗರಸಭೆ ಮತ್ತು ಗ್ರಾಮ ಪಂಚಾಯಿತಿ)ಗಳಿಗೆ ನಗರ ಯೋಜನಾ ಹಾಗೂ ಇನ್ನಿತರೆ ತಾಂತ್ರಿಕ ವಿಷಯಗಳಲ್ಲಿ ನೆರವು ಹಾಗೂ ಖಾಸಗಿ ಬಡಾವಣೆಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನೀಡಲಾಗುವ ಅನುಮತಿಗಳಿಗೆ ಪ್ರಾಧಿಕಾರವು ಪರಿಶೀಲನಾ ಶುಲ್ಕ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತದೆ.

**ಕಾರ್ಯಕ್ರಮಗಳು:–**

ಪ್ರಾಧಿಕಾರವು ತನ್ನ ವ್ಯಾಪ್ತಿಗೆ ಮಹಾಯೋಜನೆ (ಪರಿಷ್ಕೃತ–01)–2021ನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯುವ, ಕಾಯ್ದೆಯನ್ವಯ ಮಹಾಯೋಜನೆಯನ್ನು ಪರಿಷ್ಕರಿಸುವ, ಮಹಾಯೋಜನೆ ರೀತ್ಯಾ ಅಭಿವೃದ್ಧಿಗಳನ್ನು ನಿಯಂತ್ರಿಸುವ ಮತ್ತು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡುವ ಹಾಗೂ ಕಾರ್ಯಗತಗೊಳಿಸುವ, ವಸತಿ ಯೋಜನೆಗಳನ್ನು ಕೈಗೊಂಡು ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚುವ ಮತ್ತು ಮಹಾಯೋಜನೆಯಂತೆ ವಿವಿಧ ಭೂ ಉಪಯೋಗಗಳನ್ನು ನಿಯಂತ್ರಿಸುವ ಮುಖ್ಯ ಕಾರ್ಯಕ್ರಮಗಳನ್ನು ಹೊಂದಿರುತ್ತದೆ.

## 2 ಆಡಳಿತಾತ್ಮಕ ರಚನೆ:–

**1) ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರವು 2020–21 ನೇ ಸಾಲಿನಲ್ಲಿ ಕೆಳಕಂಡಂತೆ ಆಡಳಿತ ವ್ಯವಸ್ಥೆ ಹೊಂದಿರುತ್ತದೆ.**

| ಕ್ರಸಂ | ಪದನಾಮ ಮತ್ತು ವಿಳಾಸ | ಪ್ರಾಧಿಕಾರದ ಅಧ್ಯಕ್ಷರು/ಸದಸ್ಯರುಗಳು |
|---|---|---|
| 01 | ಆಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ | ಅಧ್ಯಕ್ಷರು |
| 02 | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ | ಸದಸ್ಯರು |
| 03 | ಶ್ರೀ.ಪುಟ್ಟರಂಗಶೆಟ್ಟಿರವರು, ಶಾಸಕರು, ಚಾಮರಾಜನಗರ ವಿಧಾನಸಭಾ ಕ್ಷೇತ್ರ, | ಸದಸ್ಯರು |
| 04 | ಮಾನ್ಯ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ | ಪದನಿಮಿತ್ತ ಸದಸ್ಯರು |
| 05 | ಸೂಪರಿಂಟೆಂಡೆಂಟ್ ಆಫ್ ಪೋಲಿಸ್, ಚಾಮರಾಜನಗರ ಜಿಲ್ಲೆ, ಚಾಮರಾಜನಗರ | ಪದನಿಮಿತ್ತ ಸದಸ್ಯರ |
| 06 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಾಮರಾಜನಗರ. | ಸದಸ್ಯರು |
| 07 | ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಚಾಮರಾಜನಗರ. | ಸದಸ್ಯರು |
| 08 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು & ಒಳಚರಂಡಿ ಮಂಡಳಿ, ಚಾಮರಾಜನಗರ. | ಸದಸ್ಯರು |
| 09 | ಜಿಲ್ಲಾ ಆರೋಗ್ಯಾಧಿಕಾರಿಗಳು, ಚಾಮರಾಜನಗರ. | ಸದಸ್ಯರು |
| 10 | ಪೌರಾಯುಕ್ತರು, ನಗರಸಭೆ, ಚಾಮರಾಜನಗರ. | ಪದನಿಮಿತ್ತ ಸದಸ್ಯರು |
| 11 | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಚಾಮರಾಜನಗರ. | ನಗರ ಯೋಜನಾ ಸದಸ್ಯರು |
| 12 | ನುರಿತ ವಾಸ್ತುಶಿಲ್ಪಿ | ಸರ್ಕಾರದಿಂದ ನಾಮ ನಿರ್ದೇಶನ ಆಗಿರುವುದಿಲ್ಲ. |
| 13 | ನಗರಸಭಾ ಸದಸ್ಯರು, ಚಾಮರಾಜನಗರ. | ನಗರಸಭೆಯಿಂದ ನಾಮ ನಿರ್ದೇಶನ ಆಗಿರುವುದಿಲ್ಲ. |
| 14 | ಸರ್ಕಾರದಿಂದ 4 ಜನ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ | ಸರ್ಕಾರದಿಂದ ನಾಮ ನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. |

**2) ಆಡಳಿತಾತ್ಮಕ ವೆಚ್ಚದ ವಿವರ :–**

1) ಅಧ್ಯಕ್ಷರ ಗೌರವ ಸಂಭಾವನೆ ಹಾಗೂ ಮನೆ ಬಾಡಿಗೆ ಭತ್ಯೆ, ಇಂಧನ, ವಾಹನ ಚಾಲಕನ ವೇತನ ಮತ್ತು ಇತರೆ ವೆಚ್ಚ
2) ಆಯುಕ್ತರು ವೇತನ
3) ನಗರ ಯೋಜನಾ ಸದಸ್ಯರ ವೇತನ – ಹುದ್ದೆ ಖಾಲಿ
4) ಸರ್ಕಾರದಿಂದ ನೇಮಕವಾದ ಸದಸ್ಯರ ಗೌರವ ಸಂಭಾವನೆ
5) ಹೊರಗುತ್ತಿಗೆ ನೌಕರರ ಸೇವೆಯ ಸಂಭಾವನೆ
6) ಸಾದಿಲ್ವಾರು ವೆಚ್ಚ (ದೂರವಾಣಿ, ಪೀಠೋಪಕರಣ, ಮುದ್ರಣ, ರೇಖನಾ/ಲೇಖನಾ ಸಾಮಾಗ್ರಿ, ವಿದ್ಯುತ್, ಪತ್ರಿಕಾ ಪ್ರಕಟಣೆ ಹಾಗೂ ಇನ್ನಿತರ ವೆಚ್ಚಗಳು)

## 3 ಈವರೆಗಿನ ಪ್ರಗತಿ :–

**ಈವರೆಗೆ ಸಾಧಿಸಿದ ಒಟ್ಟಾರೆ ಪ್ರಗತಿಯ ಹೆಗ್ಗುರುತುಗಳ ಸಂಕ್ಷಿಪ್ತ ಮಾಹಿತಿ :–**

1. ಚಾಮರಾಜನಗರ ಪಟ್ಟಣದಲ್ಲಿ ಪ್ರಮುಖವಾದ ಎರಡು ಕಡೆ ಒಟ್ಟು 4.80 ಲಕ್ಷ ವೆಚ್ಚದಲ್ಲಿ ಬಸ್ ಶೆಲ್ಟರ್ ನಿರ್ಮಿಸಲಾಗಿದೆ.
2. ಚಾಮರಾಜನಗರ ತಾಲ್ಲೂಕು, ಯಡಪುರ ಗ್ರಾಮದಲ್ಲಿರುವ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಕಟ್ಟಡ ಹತ್ತಿರ (ಗುಂಡ್ಲುಪೇಟೆ ರಸ್ತೆ) ಬಸ್ ನಿಲ್ದಾಣವನ್ನು ಒಟ್ಟು 4.80 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದೆ.
3. ಚಾಮರಾಜನಗರ ಪಟ್ಟಣದ ಸೋಮವಾರಪೇಟೆ ಸತ್ಯಮಂಗಲ ರಸ್ತೆ, ಹೆಚ್.ಪಿ ಪೆಟ್ರೋಲ್ ಬಂಕ್ ಹಿಂಭಾಗದಲ್ಲಿ ರೂ.4.63 ಲಕ್ಷಗಳ ವೆಚ್ಚದಲ್ಲಿ ಕೊಳವೆ ಬಾವಿ ನಿರ್ಮಿಸಿ ತೊಂಬೆ ಹಾಗೂ ಮೋಟರ್ ಅಳವಡಿಸಲಾಗಿದೆ.
4. ಮಾಸ್ಟರ್ ಪ್ಲಾನ್‌ನಲ್ಲಿ ಪ್ರಸ್ತಾವಿಸಿರುವ ವರ್ತುಲ ರಸ್ತೆಯ ನಂಜನಗೂಡು ಮುಖ್ಯ ರಸ್ತೆಯಿಂದ ಗುಂಡ್ಲುಪೇಟೆ ಮುಖ್ಯ ರಸ್ತೆಯವರೆಗೆ 18.0ಮೀ ಅಗಲದ ರಸ್ತೆಯನ್ನು ರೂ.554.02 ಲಕ್ಷಗಳ ವೆಚ್ಚದಲ್ಲಿ ಸಿ.ಎಂ.ಎಸ್.ಎಂ.ಟಿ.ಡಿ.ಪಿ ಯೋಜನೆಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

## 4 ಸಂಪನ್ಮೂಲಗಳ ಕ್ರೋಢೀಕರಣ :–

1. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) – ಯಾವುದೂ ಇಲ್ಲ.
2. ಮುನಿಸಿಪಾಲಿಟಿ ನಿಧಿ – ಯಾವುದೂ ಇಲ್ಲ.

### 2020–21 ನೇ ಸಾಲಿನ ಅಯವ್ಯಯ :–

**2020–21ನೇ ಸಾಲಿಗೆ ಒದಗಿಸಿದ ಆಯವ್ಯಯದ ಸಂಕ್ಷಿಪ್ತ ವಿವರ**

| ವಿವರ | 2020–21 ನೇ ಸಾಲಿನ ಅಂದಾಜು |
|---|---|
| 1 | 2 |
| ಪ್ರಾರಂಭಿಕ ಶಿಲ್ಕು | 94,74,000 |
| ಜಮೆಗಳು | 13,25,30,000 |
| ಒಟ್ಟು | 14,20,04,000 |
| ಖರ್ಚುಗಳು | 13,62,22,000 |
| ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು | 57,82,000 |

## 5 2020–21 ರ ವೆಚ್ಚ :–

### 2020–21 ನೇ ಸಾಲಿನಲ್ಲಿ ಒದಗಿಸಿದ ಅಯವ್ಯಯದಲ್ಲಿನ ನಿರ್ವಹಿಸಲಾದ ವೆಚ್ಚದ ವಿವರ :

| ವಿವರ | 2020–21 ನೇ ಸಾಲಿನ ವೆಚ್ಚ |
|---|---|
| 1 | 2 |
| ಪ್ರಾರಂಭಿಕ ಶಿಲ್ಕು | 1,13,65,460 |
| ಜಮೆಗಳು | 40,61,076 |
| ಒಟ್ಟು | 1,54,26,536 |
| ಖರ್ಚುಗಳು | 76,61,634 |
| ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು | 77,64,902 |

## 6 ಭೌತಿಕ ಪ್ರಗತಿ :–

### 2020–21ನೇ ಸಾಲಿನಲ್ಲಿ ಸಾಧಿಸಿದ ಭೌತಿಕ ಪ್ರಗತಿ ವಿವರ :

1. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ಸ್ವ–ಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಗಳು) ನಿಯಮಗಳು, 1991 ಮತ್ತು ತಿದ್ದುಪಡಿ ಆದೇಶ The Karnataka Urban Development Authorities (Allotment of sites in lieu of compensation for the land acquired (Amendment) Rules, 2015) ರನ್ವಯ ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ–24ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಜಮೀನಿನ ಒಟ್ಟು ವಿಸ್ತೀರ್ಣಕ್ಕೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಪಡೆಯಲಾಗಿದ್ದು, ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25–02–2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಪ್ರಾಧಿಕಾರದ ವತಿಯಿಂದ 2021–22ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.
2. ಅನುಮೋದಿತ ವಸತಿ ಬಡಾವಣೆಗಳಲ್ಲಿನ ಉದ್ಯಾನವನ ಜಾಗೆಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸಲಾಗುತ್ತಿದೆ.
3. ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಲಾಗುತ್ತಿದೆ.
4. ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ–ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗುತ್ತಿದೆ.
5. ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡಲಾಗುವುದು.

## 7 ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ :-

1. ಪ.ಜಾತಿ ಮತ್ತು ಪ.ಪಂಗಡಗಳ (ಶೇ.24.10) – ಯಾವುದೂ ಇಲ್ಲ
2. ಬಡಜನರ ಕಲ್ಯಾಣ ನಿಧಿ (ಶೇ.7.25) – ಯಾವುದೂ ಇಲ್ಲ
3. ದಿವ್ಯಾಂಗರ ಕಲ್ಯಾಣ ನಿಧಿ (ಶೇ.5) – ಯಾವುದೂ ಇಲ್ಲ

## 8 ವಿಶೇಷ ಸಾಧನೆ/ಪ್ರಶಸ್ತಿ :- ಯಾವುದೂ ಇಲ್ಲ

## 9 2021–22ನೇ ವರ್ಷದ ಗುರಿ :-

1. ಚಾಮರಾಜನಗರ ಮತ್ತು ಮಸಗಾಪುರ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಒಟ್ಟು 14ಎ–24ಗುಂ ಭೂಮಿಯನ್ನು ಪಡೆಯಲಾಗಿದ್ದು. ಸದರಿ ಪ್ರದೇಶಕ್ಕೆ 50:50 ಅನುಪಾತದಲ್ಲಿ ವಸತಿ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸರ್ಕಾರದ ಆದೇಶ ಸಂ:ನಅಇ 578 ಮೈಅಪ್ರಾ 2015, ಬೆಂಗಳೂರು, ದಿನಾಂಕ:25–02–2016 ರಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 15(1)(ಬಿ)ರನ್ವಯ ಅನುಮೋದನೆ ನೀಡಲಾಗಿದೆ. ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಕಲಂ 18 ರನ್ವಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದಿಂದ ಪಡೆದುಕೊಂಡು ಪ್ರಾಧಿಕಾರದ ವತಿಯಿಂದ 2021–22ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.
2. ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನಾ ತಾತ್ಕಾಲಿಕ (ಪರಿಷ್ಕೃತ–02)ನ್ನು ತಯಾರಿಸಲು ಸಿಂಬಾಲಿಸಿಸ್ ಆಫ್ ಟೆಕ್ನಾಲಜಿ ಇನ್‌ವೆಸ್ಟ್‌ಮೆಂಟ್ ಅಂಡ್ ಮ್ಯಾನೇಜ್‌ಮೆಂಟ್, STEM ಬೆಂಗಳೂರು ಇವರಿಗೆ ರೂ.12,40,000/– ಗಳ ದರಪಟ್ಟಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲಾಗಿದೆ. ಈಗಾಗಲೇ ಮಹಾಯೋಜನಾ ತಾತ್ಕಾಲಿಕ (ಪರಿಷ್ಕೃತ–02)ರ ನಕ್ಷೆಯ ಕಾರ್ಯವು ಅಂತಿಮ ಹಂತದಲ್ಲಿದ್ದು, ಸದರಿ ಮಹಾಯೋಜನೆ ತಾತ್ಕಾಲಿಕ (ಪರಿಷ್ಕೃತ–02)ರ ನಕ್ಷೆ ಮತ್ತು ವರದಿಯನ್ನು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಮೂಲಕ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುವುದು.
3. ಅನುಮೋದಿತ ವಸತಿ ಬಡಾವಣೆಗಳಲ್ಲಿನ ಉದ್ಯಾನವನ ಜಾಗಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸಲಾಗುವುದು.
4. ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಲಾಗುವುದು.
5. ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ–ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ಧಿಪಡಿಸಲು ಪ್ರಯತ್ನಿಸಲಾಗುವುದು.
6. ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡಲಾಗುವುದು.

ಸಹಿ/–
(ಡಾ ಪಂಕಜ ಎಂ.ಎಸ್)
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಚಾಮರಾಜನಗರ.**

**CHAMARAJANAGARA - RAMASAMUDRA**

# URBAN DEVELOPMENT AUTHORITY

**CHAMARAJANAGARA - 571313**



## In the Year 2020-21

# ANNUAL REPORT

# 1 Preamble :-

Chamarajanagara Town is the Taluk and District Head Quarters of Chamarajanagara District. The Population of the Town is 69,959 as per 2011 Census. Chamarajanagara City Municipal Council is the Local body of the Town. This Town is located at a distance of 61km from the State Cultural City Mysuru and at a distance of 180 km from the Capital city of Karnataka State Bengaluru. Bengaluru-Dindigul National Highway-209, Chamarajanagara-Jevergi National Highway-150A and Yalanduru-Gundlupete State Highway-81, Chamarajanagara-Biligiriranganabetta State Highway-80, are the major roads passing through the Town. Also the Town has good Broadgauge Railway Network. According to Karnataka Town and Country Planning Act 1961 section 4(c) The Government has been declared Local Planning Area for an area of 120.99 Sq.mtr. it includes Chamarajanagara Town and surrounding 26 villages. (Chamarajanagara(Channipuradamole), Ramasamudra, Karinanjanapura, Somavarapete, Galipura, Mudlupura, Mallayyanapura, Uttuvalli, Kadahalli, Masagapura, Managanahalli, Manchenahalli, Boodithittu, Mariyala, Gangavadi, Madapura, Doddamole, Kodimole, Haradanahalli, Bandigere, Yadapura, Shivapura, Chandakavadi, Kudluru, Basavanapura, Handrakalli) As per Karnataka Development Authority Act, 1987 declare the Chamarajanagara-Ramasamudra Urban Development Authority and started functioning from dated:21-08-1998.

## Authority objectives :

As per Karnataka Town & Country Planning act 196I and Karnataka Urban Development Authority Act, 1987 in the Local Planning Area, providing technical opinion to the local bodies, technical approval to private layouts in the converted lands and to Ensure planned developments in its jurisdiction. In above, Development Authority collects the verification fees and statutory fees for sanction of plans and orders.

## Functions :

Development Authority in its jurisdiction, prepare master plan and approval should be obtained from Government, preparation of zoning regulations as per the master plan. Approval of layout plans and providing technical opinion regarding building licence, conversion purposes. Initiating housing schemes to distribute the sites to publics and control the different land use as per Master plan are the main functions of the authority.

# 2 Administative Structure :-

**1) The Administrative body of Chamarajanagara-Ramasamudra Urban Development Authority for the Year 2020-21 is as follows.**

| Sl.no | Designation and Address | | Chairman/ Member of the Authority |
|---|---|---|---|
| 1. | Chairman, Urban Development Authority, Chamarajanagara. | | Chairman |
| 2. | Commissioner, Urban Development Authority, Chamarajanagara. | | Member |
| 3. | Sri. C.Puttarangashetty, Member of Legislative Assembly, Chamarajanagara Constituency. | | Member |
| 4. | Deputy Commissioner, Chamarajanagara District, Chamarajanagara. | | Ex-officio Member |
| 5. | Superintendent of Police, Chamarajanagara District, Chamarajanagara. | | Ex-officio Member |
| 6. | Executive Engineer, PWD, Chamarajanagara. | | Member |
| 7. | Executive Engineer, CHESCOM, Chamarajanagara. | | Member |
| 8. | Assistant executive Engineer, KUWSSB, Chamarajanagara. | | Member |
| 9. | District Health Officer, Chamarajanagara. | | Member |
| 10. | Commissioner, City Municipal Council, Chamarajanagara. | | Ex-officio Member |
| 11. | Assistant Director, Town & Country Planning, Chamarajanagara. | | Town Planner Member |
| 12. | Experienced Architecture | Not Nominated from Govt. | Member |
| 13. | City Municipal Council Member | Not Nominated from CMC | Member |
| 14. | 4 Members Nominated from Government | | 4 Members |

2) **Particulars of Administrative Expenditure** :-

1) Chairman Honorarium, House Rent Allowance, Diesel, Driver salary and other Expenditure
2) Salary of Commissioner
3) Salary of Town Planner Member - Vacant
4) Honorarium of Nominated Members from Government
5) Outsource Services charges
6) Detailed Contingency Expenditure (Telephone, Furniture, Printing, Electricity, Paper notification and Stationery and other Expenditure etc., )

# 3 Achieved Progress :-

**Total achieved progress of detailed information :**

1. Two Bus Shelter @ major places were constructed @ Rs 4.80 Lakhs.
2. Bus Shelter @ Rs. 4.80 Lakhs was constructed near Government Medical Sciences Institution Buildings in Yadapura (Gundlupete Road)
3. Mini Water Tank with Borewell/Motor was installed @ Rs 4.63 Lakhs in Somavarapete village, sathyamangala road, Chamarajanagara.
4. The link road of width 18.0 Mtr which connects Gundlupete road and ring road proposed in Master Plan was taken up for development @ the cost of Rs 554.02 Lakhs under CMSMTDP Scheme.

## 4 Resources of Consolidation :-

1. Requirement and recovery and balance sheet(D.C.B) - Nil -
2. Municipality Fund - Nil -

**Budget for the Year 2020-21 :**

**Brief Budget for the year 2020-21**

| Particulars | For the year 2020-21 Estimates |
|---|---|
| **1** | **2** |
| Opening Balance | 94,74,000 |
| Receipts | 13,25,30,000 |
| Total | 14,20,04,000 |
| Payments | 13,62,22,000 |
| Closing Balance | 57,82,000 |

## 5 Expenditure of 2020-21 :-

**Brief Budget for the year 2020-21**

| Particulars | For the year 2020-21 Actual |
|---|---|
| **1** | **2** |
| Opening Balance | 1,13,65,460 |
| Receipts | 40,61,076 |
| Total | 1,54,26,536 |
| Payments | 76,61,634 |
| Closing Balance | 77,64,902 |

## 6 Physical Progress :-

**Particulars of achieved physical progress of the year 2020-21 :**

1. Under the KUDA (Allotment of sites in lieu of Compensation for the land acquired rules 1991 and (Amendment) Rules 2015, authority in joint venture has proposed a layout development of extent 14A-24G belongs to Chamarajanagara and Masagapura villages. Change of land use is made obtained from Government to take up residential scheme in 50 : 50 ratio Government permission in vide order no: ನಅಇ 578 ಮೈಅಪ್ರಾ 2015, dated : 25-02-2016 as per section 15(1)(B) of KUDA 1987, proposal as sent to government on 04-08-2016 seeking administrative approval as per section 18 of KUDA Act, 1987. So after obtaining the Administrative Approval from the government and the project will be taken up in the year 2021-22.
2. Preservation and development of parks in approved residential layouts.
3. Implementation of major road proposal as per the Master Plan with the financial assistance from Local Bodies.
4. Acquiring the land reserved for public purposes in Master Plan and developing the same as per their respective use.
5. Financial assistance will be given to the development of tanks as per Lake Development Authority.

## 7 Progress of Welfare Programmes :-

1. S.C /S.T Community Development (24.10%) - Nil -
2. Weaker Section Welfare Fund (7.25%) - Nil -
3. Physically Handicaped Welfare Fund (5%) - Nil -

## 8 Special Performance/ Award : - Nil -

## 9 Aims of 2021-22 :

1. Under the KUDA (Allotment of sites in lieu of Compensation for land acquired rules 1991 and (Amendment) Rules 2015, authority has taken over the land of extent 14A-24G belongs to Chamarajanagara and Masagapura villages. Change of land use is obtained from Government. to take of residential scheme in 50 : 50 ratio. Government permission vide order no: ನಅಇ 578 ಮೈಅಪ್ರಾ 2015, dated: 25-02-2016 as per section 15(1)(B) of KUDA 1987, is obtained after Administrative approval from government, As per section 18 of KUDA Act, 1987. Layout development will be taken up.
2. To prepare Master Plan provisional (Revised-II) for Chamarajanagara-Ramasamudra LPA, was entrusted to Symbiosis of Technology, Environment and Management, Bengaluru for Rs 12.40 Lakhs. The Master Plan preparation work is at final stage, after completing the work it will be submitted to Government through DTCP.
3. Preservation and development of parks in approved residential layouts.
4. Implementation of major road proposal in the Master Plan with the financial assistance from Local Bodies.
5. Acquiring the land reserved for public purposes in Master Plan and developing the same for their respective use.
6. Financial assistance will be given to the development of tanks as per Lake Development Authority Guidelines.

Sd/-
(Dr Pankaja M.S)
**Commissioner,**
**Urban Development Authority,**
**Chamarajanagara.**